# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 576 (582)**

**ಸದಸ್ಯರ ಹೆಸರು : ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ : 20.08.2026**

**ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಕಟ್ಟಡ ನಿರ್ಮಾಣ ಪರವಾನಿಗೆ ಪಡೆಯಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br><br>ಜಂಟಿ ನಿರ್ದೇಶಕರು, ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಇವರು ದಿನಾಂಕ:04.12.2025ರ ಪತ್ರದಲ್ಲಿ ಈ ಹಿಂದಿನ SBPAS (ನಿರ್ಮಾಣ-2) ತಂತ್ರಾಂಶವನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸಿ ULMS ಎಂಬ ತಂತ್ರಾಂಶವನ್ನು ಕಡ್ಡಾಯವಾಗಿ ಉಪಯೋಗಿಸುವ ಕುರಿತು ನಿರ್ದೇಶನ ನೀಡಲಾಗಿರುತ್ತದೆ.<br><br>ಅದರಂತೆ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ULMS ನೂತನ ತಂತ್ರಾಂಶದ ಮೂಲಕ ಕಟ್ಟಡ ಪರವಾನಿಗೆ ವಿತರಣೆ ಮಾಡಲು ಕ್ರಮವಹಿಸುತ್ತಿರುವ ತಾಂತ್ರಿಕ ಕಾರಣಗಳಿಂದ ಆರಂಭದಲ್ಲಿ ಕಟ್ಟಡ ಪರವಾನಿಗೆ ಪಡೆಯಲು ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. |
| (ಆ) | ಸದರಿ ಪಾಲಿಕೆಯಲ್ಲಿ ಕಟ್ಟಡ ನಿರ್ಮಾಣ ಪರವಾನಿಗೆ ಸಲ್ಲಿಸುವ ಅರ್ಜಿಗಳ ಸಂಖ್ಯೆ ಕಡಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಈ ಹಿಂದಿನ SBPAS (ನಿರ್ಮಾಣ-2) ತಂತ್ರಾಂಶದ ಮೂಲಕ ಪ್ರತಿ ತಿಂಗಳು ಅಂದಾಜು 40 ಕಟ್ಟಡ ಪರವಾನಿಗೆ ನೀಡಲಾಗುತ್ತಿತ್ತು.<br><br>ಆದರೆ, ULMS ಎಂಬ ನೂತನ ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಆರಂಭದಲ್ಲಿ ತಾಂತ್ರಿಕ ಕಾರಣಗಳಿಂದ ಅರ್ಜಿಗಳ ಸಂಖ್ಯೆ ಕಡಿತವಾಗಿರುವುದು ವಾಸ್ತವ ಸಂಗತಿಯಾಗಿರುತ್ತದೆ.<br><br>ಸದರಿ ತಂತ್ರಾಂಶದ ಮೂಲಕ ಜುಲೈ ತಿಂಗಳಿನಲ್ಲಿ 13 ಹಾಗೂ ಆಗಸ್ಟ್ ತಿಂಗಳಿನಲ್ಲಿ ಇದುವರೆಗೂ 23 ಕಟ್ಟಡ ಪರವಾನಿಗೆ ನೀಡಲಾಗಿರುತ್ತದೆ. |
| (ಇ) | ಸದರಿ ಪಾಲಿಕೆಯಲ್ಲಿ ಕಟ್ಟಡ ನಿರ್ಮಾಣ ಪರವಾನಿಗೆ ಸಲ್ಲಿಸುವ ಅರ್ಜಿಗಳ ಸಂಖ್ಯೆ ಕಡಿತವಾಗಿರುವುದಕ್ಕೆ ಕಾರಣವೇನು: | Unified Land Monitoring System (ULMS) 2 ನೂತನ ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಆರಂಭದಲ್ಲಿ ತಾಂತ್ರಿಕ ಕಾರಣಗಳಿಂದ ತೊಂದರೆಯಾಗಿದ್ದು, ತಂತ್ರಾಂಶವು ಸಹಜ ಸ್ಥಿತಿಗೆ ಬಂದಿರುವುದಿಲ್ಲ. ಇದರಿಂದ ಅರ್ಜಿಗಳ ಸಂಖ್ಯೆ ಕಡಿಮೆಯಾಗಿರುತ್ತವೆ. |

| | | |
|---|---|---|
| (ಈ) | ನಿರ್ಮಾಣ ಪರವಾನಿಗೆ ಸಲ್ಲಿಸುವ ಅರ್ಜಿಗಳ ಸಂಖ್ಯೆ ಕಡತವಾಗಿರಲು ಸರ್ಕಾರದಿಂದ ಯಾವ ಕ್ರಮ ಜರುಗಿಸಲಾಗುವುದು? | ULMS ನೂತನ ತಂತ್ರಾಂಶದಲ್ಲಿ ಕಂಡು ಬರುವ ತಾಂತ್ರಿಕ ದೋಷಗಳನ್ನು Technical Team ಗೆ ದೂರು ಸಲ್ಲಿಸಿ, ಸದರಿ ದೂರು Resolve ಮಾಡಿದ ನಂತರ ತಾಂತ್ರಿಕ ತೊಂದರೆಗಳು ನಿವಾರಣೆಯಾಗುತ್ತಿರುವುದರಿಂದ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುತ್ತಿದೆ.<br><br>ಈಗಾಗಲೇ ದಿ:14.08.2026 ರಂದು ಇರುವಂತೆ ULMS ನೂತನ ತಂತ್ರಾಂಶದ ಮೂಲಕ ಸ್ವೀಕೃತವಾಗಿದ್ದ 115 ಕಟ್ಟಡ ಪರವಾನಿಗೆಗಳ ಅರ್ಜಿಗಳ ಪೈಕಿ 40 ಅರ್ಜಿಗಳನ್ನು ಅನುಮೋದಿಸಿ ಕಟ್ಟಡ ಪರವಾನಿಗೆ ನೀಡಲಾಗಿರುತ್ತದೆ. |

ನಅಇ 53 ಎಬಿಸಿ 2026 (ಇ)

(ಡಾ. ಯತೀಂದ್ರ ಸಿದ್ದರಾಮಯ್ಯ)
ನಗರಾಭಿವೃದ್ಧಿ ಸಚಿವರು